■ ಹನಿ

## ದಾನಶೂರ ಬಫೆಟ್



ಬರ್ಕ್‌ಷೈರ್ ಹಾಥ್‌ವೇ ಕಂಪೆನಿಯ ಚೇರ್‌ಮನ್, 83ರ ಅಜ್ಜ ವಾರೆನ್ ಬಫೆಟ್ ಕಳೆದ ವಾರ ಇನ್ನಷ್ಟು ಭಾರೀ ದಾನಗಳನ್ನು ಪ್ರಕಟಿಸಿದರು. ಐದು ದತ್ತಿ ಸಂಸ್ಥೆಗಳಿಗೆ ಮಾಡಿದ ಈ ದಾನದಲ್ಲಿ ಅತ್ಯಂತ ಪ್ರಮುಖವಾದದ್ದು ಬಿಲ್ ಗೇಟ್ಸ್ ಫೌಂಡೇಶನ್‌ಗೆ ಮಾಡಿದ 2.8 ಶತಕೋಟಿ ಡಾಲರ್ ದಾನ. ತನ್ನ ಗಳಿಕೆಯ ಶೇಕಡಾ 99ರಷ್ಟನ್ನು ದತ್ತಿ ಸಂಸ್ಥೆಗಳಿಗೆ ದಾನ ಮಾಡಲೇಬೇಕೆಂದು ನಿರ್ಧರಿಸಿರುವ ವಾರೆನ್ ಬಫೆಟ್, ನಿರಂತರವಾಗಿ ಪ್ರತಿ ತಿಂಗಳೂ ಹೊಸ ಹೊಸ ದಾನಗಳನ್ನು ಪ್ರಕಟಿಸುತ್ತಲೇ ಇದ್ದಾರೆ. ಆದರೂ ಅವರ ಆಸ್ತಿ ಕರಗುತ್ತಿಲ್ಲ. ಈ ಬರಹ ಬರೆಯುವ ಹೊತ್ತಿಗೆ ಅವರ ಒಟ್ಟು ಆಸ್ತಿ ಮೌಲ್ಯ ಇನ್ನೂ 63 ಶತಕೋಟಿ ಡಾಲರ್ ಇದೆ!

ಹಲವಾರು ವರ್ಷಗಳಿಂದ ಹೀಗೆ ಕೋಟಿಗಟ್ಟಳೆ ಹಣವನ್ನು ದಾನ ಮಾಡಿದರೂ ಅದ್ಯಾಕೆ ಆಸ್ತಿ ಕರಗುತ್ತಿಲ್ಲ ಎಂದರೆ, ಈ 83ರ ಇಳಿವಯಸ್ಸಿನಲ್ಲೂ ಅಜ್ಜ ಬಫೆಟ್ ಹೂಡಿಕೆ ಮಾಡುತ್ತಲೇ ಇದ್ದಾರೆ, ಲಾಭ ಪಡೆಯುತ್ತಲೇ ಇದ್ದಾರೆ! ತೀರಾ ಇತ್ತೀಚೆಗೆ 3ಜಿ ಕ್ಯಾಪಿಟಲ್ಸ್ ಜತೆ ಸೇರಿ ಕೆಚಪ್ ದೈತ್ಯ ಕಂಪೆನಿ ಎಚ್.ಜೆ.ಹೆಂಜ್ಸ್‌ಅನ್ನು ಅವರು 23.2 ಶತಕೋಟಿ ಡಾಲರ್‌ಗೆ ಖರೀದಿಸಿದರು. ಎಕ್ಸಾನ್ ಮೊಬೈಲ್ ಕಂಪೆನಿಯಲ್ಲಿ 4 ಶತಕೋಟಿ ಡಾಲರ್ ಹೂಡಿಕೆ ಮಾಡಿದರು. ಹಾಗೆಯೇ ಅವರ ಉಪಕಂಪೆನಿಯೊಂದು ನೆವಾಡಾದ ಎನ್‌ವಿ ಎನರ್ಜಿ ಕಂಪೆನಿಯನ್ನು 5.6 ಶತಕೋಟಿ ನೀಡಿ ಖರೀದಿಸಿತು. ಈ ಹೊಸ ಕಂಪೆನಿಗಳ ಲಾಭದಿಂದ ಮತ್ತೆ ಮಿಲಿಯಗಟ್ಟಳೆ ಡಾಲರ್ ಅವರ ಆಸ್ತಿಗೆ ಸೇರುತ್ತಲೇ ಇರುತ್ತದೆ. ಗಳಿಸುವುದು, ದಾನ ಮಾಡುವುದು– ಎರಡನ್ನೂ ಈ ಅಜ್ಜ ಮನಃಪೂರ್ತಿ ಎಂಜಾಯ್ ಮಾಡುತ್ತಿದ್ದಾರೆ.

2008ರಲ್ಲಿ ಜಗತ್ತಿನ 'ನಂಬರ್ ಒನ್ ಶ್ರೀಮಂತ' ಎನ್ನಿಸಿಕೊಂಡಿದ್ದ ವಾರೆನ್ ಬಫೆಟ್, ಈಗಲೂ ಶ್ರೀಮಂತಿಕೆಯಲ್ಲಿ 3 ಅಥವಾ 4ನೇ ಸ್ಥಾನದಲ್ಲಿದ್ದಾರೆ. ಆದರೆ ಅವರ ಹೃದಯ ಶ್ರೀಮಂತಿಕೆಯನ್ನು ಮೀರಿಸುವವರು ಯಾರೂ ಇಲ್ಲ. ಸಣ್ಣ ಪುಟ್ಟ ಕಂಪೆನಿಗಳ ಸಿಇಓ ಗಳೆಲ್ಲ ಪ್ರತಿ ತಿಂಗಳೂ ಕೋಟಿಗಟ್ಟಳೆ ಡಾಲರ್ ಸಂಬಳ ಪಡೆಯುತ್ತಿದ್ದರೆ, ಬಫೆಟ್ ಅವರ ಸಂಬಳ ಈಗಲೂ ಒಂದು ಲಕ್ಷ ಡಾಲರ್ ಮಾತ್ರ. 2004ರಲ್ಲಿ ಮೊದಲ ಪತ್ನಿ ತೀರಿದ ಬಳಿಕ 2006ರಲ್ಲಿ ಈ ಅಜ್ಜ ಇನ್ನೊಂದು ಮದುವೆಯಾದರು. ಮೊದಲ ಪತ್ನಿಯ ಮೂರು ಮಕ್ಕಳ ಜತೆಗೆ ಇವರದ್ದು ಸುಖೀ ಸಂಸಾರ. 2 ವರ್ಷದ ಹಿಂದೆ ಪ್ರಾಸ್ಟೇಟ್ ಕ್ಯಾನ್ಸರ್ ಪತ್ತೆಯಾದದ್ದು ಅದಕ್ಕೆ ಯಶಸ್ವೀ ಚಿಕಿತ್ಸೆ ನೀಡಲಾಗಿದೆ. ಬಫೆಟ್ ಬಗ್ಗೆ 50ಕ್ಕೂ ಹೆಚ್ಚು ಪುಸ್ತಕಗಳು ಬಂದಿವೆ. ಅಮೆರಿಕದ ಅಧ್ಯಕ್ಷರು ಮತ್ತು ದಲೈಲಾಮಾ ಬಿಟ್ಟರೆ ಬಹುಶಃ ಇನ್ನಾರ ಮೇಲೂ ಇಷ್ಟೊಂದು ಸಂಖ್ಯೆಯ ಪುಸ್ತಕಗಳು ಬಂದಿರಲಿಕ್ಕಿಲ್ಲ. ಹತ್ತರ ಹರೆಯದಲ್ಲದೇ ಚೂಯಿಂಗ್ ಗಮ್, ಕೋಕಾಕೋಲ, ಮ್ಯಾಗಸಿನ್‌ಗಳನ್ನು ಮಾರಾಟ ಮಾಡಿ ಲಾಭ ಮಾಡುತ್ತಿದ್ದ, 11ರ ಹರೆಯದಲ್ಲೇ ಷೇರು ಖರೀದಿ ಮಾಡಿದ ವಾರೆನ್ ಬಫೆಟ್, 20ನೇ ಶತಮಾನದ ಅತ್ಯಂತ ಯಶಸ್ವಿ ಹೂಡಿಕೆದಾರ ಎನ್ನುವುದರಲ್ಲಿ ಎರಡು ಮಾತಿಲ್ಲ.



## ಫ್ರೀ ರಿಹಾನ್ನಾ

ಜಗತ್ತಿನ ಅತ್ಯಂತ ಪ್ರಭಾವಶಾಲಿ ಸೆಲೆಬ್ರಿಟಿಗಳಲ್ಲಿ 10ರೊಳಗಿನ ಸ್ಥಾನ ಪಡೆದಿರುವ ಗಾಯಕಿ, ನಟಿ, ಫ್ಯಾಷನ್ ಡಿಸೈನರ್ ರಿಹಾನ್ನಾ ಮತ್ತೊಮ್ಮೆ ವಿವಾದ ಎಬ್ಬಿಸಿದ್ದಾಳೆ. ಆಕೆ 'ಫ್ರೀ ಪ್ಯಾಲಸ್ತೀನ್' ಎಂದು ಟ್ವೀಟ್ ಮಾಡಿದ್ದು, ದೊಡ್ಡ ಗದ್ದಲವಾಗಿ ಎಂಟೇ ನಿಮಿಷದಲ್ಲಿ ಆ ಟ್ವೀಟ್ ಮಾಯವಾಗಿದೆ! ಜಾಲತಾಣದಲ್ಲಿ 36 ದಶಲಕ್ಷ ಅಭಿಮಾನಿಗಳನ್ನು ಹೊಂದಿರುವ ರಿಹಾನ್ನಾ, ಇಸ್ರೇಲ್ ಮತ್ತು ಪ್ಯಾಲಸ್ತೀನ್ ವಿವಾದದಲ್ಲಿ ಮೂಗು ತೂರಿಸಿದ್ದೇ ತಪ್ಪು ಎಂಬಂತೆ ಅಭಿಮಾನಿಗಳಿಗೆ ಕಾಣಿಸಿದೆ. ಹಾಗೆಂದು ಆಕೆ ಇಸ್ರೇಲ್ ಪರ ಇರಲೂ ಸಾಧ್ಯವಿಲ್ಲ. ಈ ಹಿಂದೆ ಆಕೆಯ ಇಸ್ರೇಲ್ ಪ್ರವಾಸ ಮತ್ತು ಲೈವ್ ಷೋ ಅನ್ನು ಅಭಿಮಾನಿಗಳ ಒತ್ತಡಕ್ಕೆ ಮಣಿದೇ ರದ್ದು ಮಾಡಬೇಕಾಗಿ ಬಂದಿತ್ತು. ಜಗತ್ತಿನ ಎಲ್ಲ ದೇಶಗಳಲ್ಲೂ ಅಭಿಮಾನಿಗಳನ್ನು ಹೊಂದಿರುವ ಈ ಬಾರ್ಬಡೋಸ್ ಸುಂದರಿ, 7 ಬಾರಿ ಗ್ರಾಮ್ಮಿ ಪ್ರಶಸ್ತಿ ಗೆದ್ದು ದಾಖಲೆ ನಿರ್ಮಿಸಿದಾಕೆ. ಜಗತ್ತಿನ ಅತ್ಯುತ್ತಮ ಫ್ಯಾಶನ್ ಡಿಸೈನರ್‌ಗಳಲ್ಲಿ ಒಬ್ಬಳೆಂದೂ ಈಕೆ ಹೆಸರು ಪಡೆದವಳು. ಪ್ಯಾಲಸ್ತೀನ್ ಬಗ್ಗೆ ಹಲವು ಹಾಡುಗಳನ್ನು ಹಾಡಿರುವ ಈಕೆಗೆ ಅಲ್ಲಿ, ನಡೆದಿರುವ ಮುಗ್ಧ ನಾಗರಿಕರ ನರಮೇಧವನ್ನು ಖಂಡಿಸಲು ಸ್ವಾತಂತ್ರ್ಯವಿಲ್ಲ ಎನ್ನುವುದು ನಿಜಕ್ಕೂ ಚೋದ್ಯದ ಸಂಗತಿ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65